ಮಾಡಿ...' ಅಂತಂದು, 'ಅದಿರಲಿ... ಬೆಳಿಗ್ಗೆ ಏಳುತ್ತಲೇ ನಮಗೇ ಫೋನು ಮಾಡಬೇಕು ಅಂತ ಹೇಳಿದರಲ್ಲ, ಯಾಕೇಂತ ಏನಾದರೂ ಗೊತ್ತಾ?' ಎಂದು ಶರಣಪ್ಪನೆಡೆ ತಿರುಗಿ ಕೇಳಿದಳು.

'ತಿಳೀದು ಮೇಡಂ... ಆದರೆ ನೀಲ್ ಸಾರ್ ಬಂದೇ ಬರುತಾರೆ. ಬರುತ್ತಲೇ ಈ ಕವರ್ ಕೊಡು ಅಂತ ಕೊಟ್ಟಿದಾರೆ ನೋಡಿ...' ಶರಣಪ್ಪ ಪೆಚ್ಚುಮೋರೆ ತಾಳಿಕೊಂಡು ಹೇಳಿದ. ಅವನ ಬದಿಜೇಬಿನಲ್ಲಿ ಕಂದುಬಣ್ಣದ ಪುರಾತನ ಲಕೋಟೆಯೊಂದಿತ್ತು. ಅದರ ಮೇಲೆ ಇಂಗ್ಲೆಂಡಿನ ಉತ್ತರಸೀಮೆಯಲ್ಲಿರುವ 'ಬರ್ಕ್‌ಶೈರ್' ಅಂತೆಂಬ ಹಳ್ಳಿಯೊಂದರ ವಿಳಾಸವಿದ್ದಿತು. ಆರ್ಥರ್ ಡೇವಿಡ್ ಹ್ಯೂಸ್‌ನ ಮೂಲವಲ್ಲಿಯದೇನೋ... ರೇಣು ಶರಣಪ್ಪನ ಕಡೆಯಿಂದ ಕವರಿಸಕೊಂಡು ಒಡೆದಳು. ಡೇವಿಡ್ ಹ್ಯೂಸ್ ಕೈಯಾರೆ ಬರೆದ ಮೂರು ಹೆಸರುಗಳೂ, ಅವರ ಮೊಬೈಲಂಕಿಗಳೂ ಅದರಲ್ಲಿದ್ದವು. 'ಥಾಮಸ್ ಆರ್ಥರ್ ಹ್ಯೂಸ್' ಅಂತೆಂಬ ಹೆಸರೋದಿದ್ದೇ ರೇಣು, 'ಬಹುಶಃ ಇದು ಅವರ ಮಗನಿರಬೇಕು...' ಅಂತೆಂದು ಊಹಿಸಿದಳು. 'ಬಡಾನೀಲ್... ಈಗ ನೀನು ಈ ಮನುಷ್ಯನಿಗೆ ಫೋನು ಮಾಡಬೇಕು...' ಅಂತಂದು, ಗಂಡನ ಕಿಸೆಯಲ್ಲಿದ್ದ ಅವನ ಮೊಬೈಲಿಸಕೊಂಡು ತಾನೇ ಡಯಲಿಸಿದಳು. ಒಂದೆರಡು ರಿಂಗಿಗೆಲ್ಲ, ಅತ್ತಲಿನ ಆಸಾಮಿ ಮಾತಿಗೆ ಸಿಕ್ಕಿದ. ತಕ್ಷಣವೇ ರೇಣು ಫೋನನ್ನು ರುದ್ರನೀಲ ಥಾಪಸೆಗೆ ಹಸ್ತಾಂತರಗೈದಳು.

'ಹೆಲೋ... ಕಾಲಿಂಗ್ ಫ್ರಮ್ ಬ್ಯಾಂಗಲೋರ್...' ಅಂತಂದು, ರುದ್ರನೀಲ ಥಾಪಸೆ ನಿಧಾನವಾಗಿ ಮಾತಿಗಿಳಿದ. ರೇಣುಯುಕ್ತಿಯ ಊಹೆ ಸರಿಯೇ ಇದ್ದಿತು. ಥಾಮಸ್ ಆರ್ಥರ್ ಹ್ಯೂಸ್ ಡೇವಿಡ್ ಹ್ಯೂಸ್‌ನ ಮಗನೇ ಹೌದಾಗಿದ್ದ. ಆತ ವಿಷಯ ತಿಳಿದಿದ್ದೇ ತನಗೂ, ತನ್ನ ಕುಟುಂಬಕ್ಕೂ, ಸತ್ತ ಈ ಮನುಷ್ಯನಿಗೂ ಯಾವುದೇ ಸಂಬಂಧವಿಲ್ಲವೆಂದು, ಕಟು ನಿಷ್ಠುರವಾಗಿ ಆಡಿಬಿಟ್ಟ!

'ವಾಟ್ ಡು ವಿ ಡು ವಿತ್ ಹಿಸ್ ಬಾಡಿ, ದೆನ್?...' ನಿನ್ನಪ್ಪನ ಶರೀರವನ್ನೇನು ಮಾಡುವುದೆಂದು, ರುದ್ರನೀಲ ಥಾಪಸೆ, ಬಲು ಆರ್ದ್ರವಾಗಿ ಕೇಳಿದ. 'ಜಸ್ಟ್ ಫಕ್ಕಿಟ್...' ಅಂತೆಂಬ ಉತ್ತರವುಂಟಾಗಿ, ಹಿಂದೆಯೇ ಫೋನು ಕಡಿಯಿತು! ಆ ಹೊತ್ತಿನಲ್ಲಿ ರುದ್ರನೀಲ ಥಾಪಸೆಗೆ ತನ್ನ ಮಗ ಇಂದ್ರನೀಲನ ಕುರಿತಾಗಿ ಸಿಕ್ಕಾಪಟ್ಟೆ ಮನಸುನ್ಮಾದಿಸಿ ಬಂತು. ಗೊತ್ತಿರದೆ ಕಣ್ದುಂಬಿಕೊಂಡು ಅತ್ತುಬಿಟ್ಟ.

ರೇಣುಯುಕ್ತಿ ಯಾವುದೇ ನಾಜೂಕಿನ ವಿಷಯದಲ್ಲಾದರೂ ಎಂದಿನಂತೆ ಬಲುದಿಟ್ಟೆಯೇ ಸರಿ. 'ಬಡಾನೀಲ್... ಈಗ ಏನು ಮಾಡಬೇಕೂಂತ ನನಗೆ ಗೊತ್ತು. ಇದು ಸೂಇಸೈಡಿನ ವಿಷಯ. ಪೊಲೀಸ್ಗೆ ತಿಳಿಸಬೇಕು. ಮೊದಲು ನೆಲಮಂಗಲಕ್ಕೆ ಹೋಗಿ ಕಂಪ್ಲೇಂಟ್ ಕೊಟ್ಟು ಬರೋಣ... ಆಮೇಲಿಕ್ಕೆ ಅವರು ಏನು ಹೇಳುತ್ತಾರೋ ಮಾಡಿದರಾಯಿತು...' ಅಂತಂದು, ಜಾಗರೂಕವಾಗಿ ಮಾತನಾಡಿದಳು. 'ಚಲೋ ಚಲೋ... ಲೆಟ್ಸ್ ಗೆಟ್ ಗೋಇಂಗ್...' ಅಂತಂದು, ಗಂಡನನ್ನು ಹೊರಳಿಸಿ, 'ನಾವು ಸ್ಟೇಶನ್ನಿಗೆ ಹೋಗಿ ಪೊಲೀಸ್ ಕರಕೊಂಡು ಬರುತೀವಿ, ಶರಣಪ್ಪ... ಅಲ್ಲೀವರೆಗೆ ಏನೂ ಮಾಡೋದು ಬೇಡ...' ಎಂದು ಶರಣಪ್ಪನಿಗೆ ಹೇಳಿದಳು.

'ರೇಣು ಮೇಡಂ... ಡೇವಿಡ್ ಸಾರ್ ವಾರದ ಹಿಂದೆ ಒಂದು ವಿಷಯ ಹೇಳಿದ್ದರು...' ಶರಣಪ್ಪ, ಇವರಿಬ್ಬರೂ ಏರಿದ ಕಾರಿನತ್ತಲೇ ಬಳಿಸಾರಿ ಬಂದು, ಕಿಟಕಿಯ ಮೂಲಕ ಹೇಳಿದ. 'ನಾನು ಸತ್ತರೆ ಯಾರಿಗೂ ಹೇಳದೆ ನೀನೇ ನನ್ನನ್ನು ಮಣ್ಣು ಮಾಡಬೇಕು... ಇಲ್ಲೇ